◆ **ಪುರುಷರಿಗಿಂತಲೂ ಭಿನ್ನವಾಗಿ ಸ್ತ್ರೀಕೇಂದ್ರಿತ ಪ್ರಕಾಶನ ಸಂಸ್ಥೆಗಳು ಹೇಗೆ ಕಾರ್ಯ ನಿರ್ವಹಿಸುತ್ತವೆ? ಆನ್‌ಲೈನ್ ಸಾಹಿತ್ಯ ಪತ್ರಿಕೆಯ ಸಂಪಾದಕರಾಗಿ ನಿಮ್ಮ ಅಭಿಪ್ರಾಯವೇನು?**

ಈ ಪ್ರಶ್ನೆಯ ಹಿಂದಿರುವ ಮನೋಧರ್ಮ ಮತ್ತು ಕಾಳಜಿ ನನಗೆ ಅರ್ಥವಾಯ್ತು. ಅಂತಹ ಮೂಲಭೂತ ವ್ಯತ್ಯಾಸಗಳೇನೂ ನನಗೆ ಕಂಡಿಲ್ಲ.

◆ **ನಿಮ್ಮಲ್ಲಿ ಜನ ಸಾಮಾನ್ಯರ ಬದುಕು ಹೇಗಿದೆ?**

ಈಗಾಗಲೇ ನಾನು ಹೇಳಿದಂತೆ ಇಲ್ಲಿ ಎಲ್ಲವೂ ದುಬಾರಿ. ಕಡು ಕಷ್ಟದ ದಿನಗಳಿವು ಎನ್ನಬಹುದು. ಶಿಕ್ಷಣವೇನೋ ಭೇದವಿಲ್ಲದೆ ಗಂಡು ಹೆಣ್ಣು ಇಬ್ಬರಿಗೂ ಸಿಗುತ್ತಿದೆ. ಆರೋಗ್ಯ ಸೌಲಭ್ಯಗಳು ಏನೇನೂ ಚೆನ್ನಾಗಿಲ್ಲ. ಕೆಲಸ ಮಾಡಬೇಕಾದ ರೀತಿಯಲ್ಲಿ ಸರ್ಕಾರಿ ಆಸ್ಪತ್ರೆಗಳು ಕಾರ್ಯ ನಿರ್ವಹಿಸುತ್ತಿಲ್ಲ. ವೈದ್ಯರು ರೋಗಿಗಳನ್ನು ತಮ್ಮ ಖಾಸಗಿ ಕ್ಲಿನಿಕ್‌ಗಳಲ್ಲಿ ನೋಡಲು ಇಷ್ಟಪಡುತ್ತಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಒರಟಾಗಿ ನಡೆದುಕೊಳ್ಳುವ ನರ್ಸ್‌ಗಳು ಖಾಸಗಿ ಆಸ್ಪತ್ರೆಗಳಲ್ಲಿ ಬಹಳ ನಯವಾಗಿ ಸಭ್ಯವಾಗಿ ನಡೆದುಕೊಳ್ಳುತ್ತಾರೆ. ಪ್ರತಿದಿನ ಜನ ಸಾಮಾನ್ಯರು ತಮ್ಮ ಮಕ್ಕಳಿಗೆ ವಿದೇಶದಲ್ಲಿ ಚಿಕಿತ್ಸೆ ಕೊಡಿಸಲೊ, ಆಪರೇಷನ್ ಮಾಡಿಸಲೊ ಸಾರ್ವಜನಿಕರಿಂದ ಹಣ ಸಂಗ್ರಹಿಸುತ್ತಾರೆ. ನಾವು ತಾನೆ ಎಷ್ಟು ಕೊಡಲು ಸಾಧ್ಯ? ನಮಗೂ ಇದೆಲ್ಲಾ ಸಾಕಾಗಿ ಹೋಗಿದೆ. ಆರೋಗ್ಯ ವಿಮೆಗಾಗಿ ಸರ್ಕಾರಕ್ಕೆ ನಾವೆಲ್ಲರೂ ಪಾವತಿಸುತ್ತೇವೆ. ಇನ್ನೊಬ್ಬರ ಜೀವ ಉಳಿಸುವ ಸಲುವಾಗಿ ಹಣ ಕೊಡಲು ಜನ ಸದಾ ಸಿದ್ಧರಿರುತ್ತಾರೆ. ಆದರೆ ಕೊರೊನಾ ನಂತರ ಇದೊಂದು ದೊಡ್ಡ ದಂಧೆಯಾಗಿದೆ. ಇದಕ್ಕೆಲ್ಲಾ ಕೊನೆ ಯಾವಾಗ? ಸಮಸ್ಯೆಯನ್ನು ಪರಿಹರಿಸಬೇಕಾದ ಸರ್ಕಾರ ಏನು ಮಾಡ್ತಾ ಇದೆ ಅನ್ನೋಷ್ಟೇ ಪ್ರಶ್ನೆ.

◆ **ಮಾತೃಭಾಷೆ ವರ್ಸಸ್ ಇಂಗ್ಲಿಷ್ ಭಾಷೆಯಲ್ಲಿ ಶಿಕ್ಷಣ - ಈ ತಿಕ್ಕಾಟ ನಿಮ್ಮಲ್ಲೂ ಇದೆಯಾ? ಇದ್ದರೆ ಅದರ ಸ್ವರೂಪ ಏನು?**

ಈಗೆಲ್ಲಾ ಮಕ್ಕಳು ಮೊಬೈಲ್ ಫೋನ್ ಮೂಲಕವೇ ಇಂಗ್ಲೀಷ್ ಕಲಿಯುತ್ತಿದ್ದಾರೆ. ಆದರೆ ಅಧಿಕೃತವಾಗಿ ಅವರ ಇಂಗ್ಲಿಷ್ ಕಲಿಕೆ 6ನೇ ತರಗತಿಯಿಂದ ಅಂದರೆ ಎಲಿಮೆಂಟರಿ ಶಿಕ್ಷಣದ ಮೊದಲ ಹಂತದಿಂದ ಶುರುವಾಗುತ್ತದೆ. ಕೆಲವು ಮಕ್ಕಳು ಇಂಗ್ಲಿಷ್ ಕಲಿಯಲು ಇಷ್ಟಪಡುತ್ತಾರೆ ಕೆಲವರಿಗೆ ಇದು ಇಷ್ಟವಿಲ್ಲ. ನಿಜ ಹೇಳಬೇಕೆಂದರೆ ಇತ್ತೀಚಿಗಿನ ಮಕ್ಕಳಿಗೆ ಕಲಿಕೆಯಲ್ಲಿ ಆಸಕ್ತಿ ಇಲ್ಲ. ಬಹುತೇಕರು ಪುಸ್ತಕಗಳನ್ನು ಓದೋದೆ ಇಲ್ಲ. ಅವರುಗಳಿಗೆ ಆನ್‌ಲೈನ್ ಗೇಮ್ಸ್, ರಾಕ್ ಮ್ಯೂಸಿಕ್, ರೀಲ್ಸ್, ಇನ್‌ಸ್ಟಾ ಇವುಗಳಲ್ಲೇ ಹೆಚ್ಚು ಆಸಕ್ತಿ. ಇದಕ್ಕೂ ಮಿಗಿಲಾಗಿ ಆತಂಕದ ಮತ್ತು ದುರದೃಷ್ಟಕರ ಸಂಗತಿಯೆಂದರೆ 15 ವರ್ಷದೊಳಗಿನ ಮಕ್ಕಳು ಕುಡಿತ, ಸಿಗರೇಟ್ ಮತ್ತು ಡ್ರಗ್‌ಗಳ ಚಟಕ್ಕೆ ಬಲಿ ಬೀಳುತ್ತಿರುವುದು. ಶಾಲಾ- ಕಾಲೇಜುಗಳಿಗೆ ಇದೊಂದು ತಲೆನೋವಾಗಿ ಪರಿಣಮಿಸಿದೆ. ಪ್ರತಿದಿನ ಮಕ್ಕಳ ಬ್ಯಾಗುಗಳನ್ನು ಪರೀಕ್ಷಿಸಿದ ಮೇಲೆಯೇ ತರಗತಿ ಕೋಣೆಯ ಒಳಗೆ ಅವರನ್ನು ಕಳುಹಿಸಲಾಗುತ್ತದೆ.

◆ **ನಿಮ್ಮಲ್ಲಿ ಶಿಕ್ಷಣ ಪಡೆಯುತ್ತಿರುವ ಯುವಕ- ಯುವತಿಯರ ಆಸೆ, ಆಕಾಂಕ್ಷೆಗಳೇನು? ಅವರು ತಮ್ಮ ವೃದ್ಧ ತಂದೆ- ತಾಯಿಗಳನ್ನು ಚೆನ್ನಾಗಿ ನೋಡ್ಕೊಳ್ತಾ ಇದ್ದಾರಾ?**

ಸರಿ. ಪೋಷಕರಿಂದ ಶುರು ಮಾಡ್ತೀನಿ. ಹಿಂದೆಲ್ಲಾ ವಯಸ್ಸಾದ ತಂದೆ-ತಾಯಿಯರನ್ನ ಗಂಡು ಮಕ್ಕಳು ನೋಡಿಕೊಳ್ಳೋದು ಸಾಮಾನ್ಯ ವಾಡಿಕೆಯಾಗಿತ್ತು. ಈಗಿನ ಕಥೆ ಬದಲಾಗಿದೆ. ಆಸ್ತಿಯ ಹಕ್ಕು ಗಂಡು ಮಕ್ಕಳದ್ದಾದರೂ ಇಳಿವಯಸ್ಸಿನ ಪೋಷಕರ ಆರೈಕೆ ಮಾಡೋರು ಮಾತ್ರ ಹೆಣ್ಣು ಮಕ್ಕಳು. ಅರ್ಥಹೀನ ಅನಿಸುತ್ತೆ ಅಲ್ವಾ? ಕೆಲವು ಪೋಷಕರನ್ನು ಇಬ್ಬರೂ ಕಡೆಗಣಿಸಿಬಿಡುತ್ತಾರೆ. ಸರ್ಬಿಯಾದ ಪೋಷಕರನ್ನು ನಾನು ಸ್ವಾರ್ಥಿಗಳು ಅಂತೀನಿ. ಮದುವೆಯಾದ ತಮ್ಮ ಗಂಡುಮಕ್ಕಳು ಹೊರಹೋಗಿ ಸ್ವತಂತ್ರವಾಗಿ ಬದುಕೋದನ್ನ ಅವರು ಇಷ್ಟ ಪಡೋದೇ ಇಲ್ಲ. ಕೊನೆಗೆ 'ಮಾಡಿದ್ದುಣ್ಣೋ ಮಹರಾಯ' ಅಂತ ಅನುಭವಿಸುತ್ತಾರೆ.

ಮತ್ತೀಗ ಶಿಕ್ಷಿತ ಯುವಜನತೆಯ ಮುಖ್ಯ ಸಮಸ್ಯೆ ಏನು ಗೊತ್ತಾ? ಅವರಿಗಿಲ್ಲಿ ಮಾಡಲು ಕೆಲಸವೇ ಇಲ್ಲ. ಸಣ್ಣಪುಟ್ಟ ಕೆಲಸಕ್ಕೂ ಇಲ್ಲಿ ಪರದಾಟ. ಅದಕ್ಕೆ ಹಲವರು ಸರ್ಬಿಯಾವನ್ನು ತೊರೆದು ಹೊಸ ಬದುಕು ಅರಸಿ ಜರ್ಮನಿ, ಸ್ವೀಡನ್, ಆಸ್ಟ್ರಿಯಾ ಸ್ವಿಟ್ಜರ್‌ಲ್ಯಾಂಡ್